# ಇಂದಿನ ಆದರ್ಶಗಳ ಮಾದರಿ!

ಎಳವೆಯಲ್ಲಿ ಮಕ್ಕಳು ಕನಸುಗಳನ್ನು ಹೆಣೆಯುತ್ತಾರೆ. ಆ ಕನಸುಗಳನ್ನು ಪೋಷಿಸುವುದೆ ಸುತ್ತಲ ಜಗತ್ತು. ತಮ್ಮ ಕುಟುಂಬ, ಶಾಲೆ, ಆಟದ ಮೈದಾನ, ಪುಸ್ತಕ, ನಾಟಕ, ಸಿನಿಮಾ, ಪ್ರವಾಸ ಯಾವುದಾದರೂ ಆಗಬಹುದು. ತಮ್ಮ ಕನಸಿಗೆ ಹೊಂದುವ ಆದರ್ಶವನ್ನು ತಾವೇ ಗುರುತಿಸಿಕೊಳ್ಳುತ್ತಾರೆ. ಆ ಆದರ್ಶವನ್ನು ಹೋಲುವ ವ್ಯಕ್ತಿ ಅಕಸ್ಮಾತ್ ಕಣ್ಣಿಗೆ ಬಿದ್ದರೆ ಆತನೇ ಹೀರೊ. ಆ ನಾಯಕ ಪ್ರತಿಮೆಯನ್ನು ಮನಸ್ಸಿನಲ್ಲಿ ಪಡಿಮೂಡಿಸಿ ಅದರ ನೆರಳಿನಲ್ಲಿಯೇ ತಾವೂ ಸಾಗಲು ಪ್ರಯತ್ನಿಸುತ್ತಾರೆ. ಮಕ್ಕಳು ದೊಡ್ಡವರ ಮಾತನ್ನು ಕೇಳುವುದಿಲ್ಲ ಎಂಬುದು ಎಲ್ಲರ ಸಾಮಾನ್ಯ ದೂರು. ಆದರೆ ತಮ್ಮ ಮೇಲೆ ಪ್ರಭಾವ ಬೀರಿದ ಯಾರಾದರೊಬ್ಬರನ್ನು ಅನುಕರಿಸುತ್ತಿರುತ್ತಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಎಲ್ಲ ಎಳೆಯರ ಕಣ್ಣಿನೊಳಗೂ ಅಂಥ ಆದರ್ಶ ನಾಯಕನೊಬ್ಬ ರೂಪು ಪಡೆಯುತ್ತಾನೆ. ಪರಿಸರ ರೂಪಿಸುವುದು ಮೊದಲು ಸಿದ್ಧಾಂತ (ideology) ಗಳನ್ನು ಆ ಮೇಲೆ ಮಾದರಿ ((ideal) ಗಳನ್ನು. ಈ ವ್ಯಕ್ತಿಗತ–ಸಾಮಾಜಿಕ ಪರಿಸರದ ವ್ಯತ್ಯಾಸದಿಂದಲೇ ಒಬ್ಬನಿಗೆ ಟಿಪ್ಪು ಸುಲ್ತಾನ್ ಆದರ್ಶವಾದರೆ, ಇನ್ನೊಬ್ಬನಿಗೆ ವೀರಸಾವರ್ಕರ್ ಆದರ್ಶವಾಗಬಲ್ಲ. ಒಬ್ಬ ಗಾಂಧಿಯನ್ನು ಅನುಸರಿಸಿದರೆ ಇನ್ನೊಬ್ಬ ಮಾವೋ, ಲೆನಿನ್‌ರನ್ನು ಹಿಂಬಾಲಿಸಬಲ್ಲ. ಅಂಥವರೇ ಆಗಬೇಕೆಂದಿಲ್ಲ. ತಮ್ಮ ಆಸುಪಾಸಿನಲ್ಲೇ ಇರುವ ಯಾರಾದರೂ ಮಕ್ಕಳ ಮನಸ್ಸಿನಲ್ಲಿ ಆದರ್ಶದ ರೂಪು ಪಡೆಯಬಹುದು. ಗಾಂಧಿಯವರಿಗೆ ಅನ್ ಟು ದ ಲಾಸ್ಟ್ ಪ್ರೇರಣೆ ನೀಡಿದಂತೆಯೆ ಅಂಬೇಡ್ಕರ್ ಮೆಟ್ರಿಕ್ ಪಾಸಾದಾಗ ಕೇಳುಸ್ಕರ್ ಎಂಬ ಉಪಾಧ್ಯಾಯರೊಬ್ಬರು ನೀಡಿದ ಬುದ್ಧನ ಜೀವನ ಕುರಿತ ಪುಸ್ತಕ ಅವರಲ್ಲಿ ಆದರ್ಶದ ಬೀಜ ಬಿತ್ತಿತು. ಬಾಲ್ಯದಿಂದ ಯೌವನಕ್ಕೆ ಜಾರುವ ಸ್ಥಿತ್ಯಂತರ ಕಾಲದಲ್ಲಿ ಸಮಾಜಪರ, ಮನುಷ್ಯಪರ ಮಾದರಿಗಳನ್ನು ನೀಡದಿದ್ದರೆ ಹಿರಿಯರು ಜವಾಬ್ದಾರಿಯಿಂದ ನುಣುಚಿಕೊಳ್ಳಲಾಗುವುದಿಲ್ಲ.

ಆದರ್ಶಗಳು ಕಲಿಕೆಯ ವಿಷಯಗಳಲ್ಲ. ಬೀಜ ಫಲವತ್ತು ನೆಲವನ್ನು ಬಯಸುವಂತೆ ಅವು ವ್ಯಕ್ತಿಯನ್ನು ಆರಿಸಿಕೊಳ್ಳುತ್ತವೆ. ಅಥವಾ ಹೀಗೂ ಹೇಳಬಹುದು. ವ್ಯಕ್ತಿಯು ಯಾವುದರಿಂದ ಆಕರ್ಷಿಸಲ್ಪಡುತ್ತಾನೆ ಎಂದರೆ ಅದು ಅವನ ಮನಸ್ಸನ್ನು ಅವಲಂಬಿಸಿರುತ್ತದೆ; ಮಣ್ಣಿನ ಗುಣದ ಹಾಗೆ. ಮಳೆಬಿದ್ದ ನೆಲವೆಲ್ಲವೂ ಚಿಗುರೊಡೆಯುವುದಿಲ್ಲ. ಮರುಭೂಮಿಯಲ್ಲೂ ಖರ್ಜೂರವನ್ನು ಬೆಳೆಯುವ ಅವಕಾಶವಿದೆ. ಆದರ್ಶಗಳು ವ್ಯಕ್ತಿಯನ್ನು ಸಮಾಜಮುಖಿಯನ್ನಾಗಿ ಬೆಳೆಸುತ್ತವೆ. ಮಕ್ಕಳಲ್ಲಿ ಪ್ರಶ್ನಿಸುವ ಮನೋಧರ್ಮವನ್ನು ಬೆಳೆಸುವ, ಸೃಜನಶೀಲತೆಯನ್ನು ಅರಳಿಸುವ ಪಠ್ಯಗಳನ್ನು ಶಿಕ್ಷಣದಲ್ಲಿ ಅಳವಡಿಸಿದರೆ ಅವರು ತಮ್ಮ ದಾರಿಯನ್ನು ತಾವೇ ನಿರ್ಮಿಸಿಕೊಳ್ಳಬಲ್ಲರು. ತಮ್ಮ ಮಾದರಿ ವ್ಯಕ್ತಿ ಯಾರು ಎಂದು ಗುರುತಿಸಿಕೊಳ್ಳಬಲ್ಲರು. ತಮ್ಮ ಭೌತಿಕ ಅವಶ್ಯಕತೆಗಳನ್ನು ನಿಯಂತ್ರಿಸಿಕೊಳ್ಳಬಲ್ಲರು. ಸಮಾಜದ, ರಾಷ್ಟ್ರದ ಒಳಿತಿಗೆ ಚಿಂತಿಸಬಲ್ಲರು. ವ್ಯಕ್ತಿಯ ಇಂಥ ನಡೆಗಳೆ ಒಟ್ಟಾರೆ ಸಾಮಾಜಿಕ ಸ್ವಾಸ್ಥ್ಯಕ್ಕೆ ದಾರಿ ಮಾಡಿಕೊಡುತ್ತವೆ.

ತಂತ್ರಜ್ಞಾನದ ಈ ಯುಗದಲ್ಲಿ ಬೆಳೆಯುವ ಮಕ್ಕಳ ಮನಸ್ಸಿನೊಳಗೆ ಮೂಡುವ ಆದರ್ಶಗಳಾವುವು? ಇದು ವೇಗದ ಯುಗ! ಯಾವ ವಿಷಯವೂ, ವ್ಯಕ್ತಿಯೂ ಮನಸ್ಸಿನೊಳಗೆ ಆಳವಾಗಿ ಇಳಿಯುವುದೇ ಇಲ್ಲ. ಪುಸ್ತಕಗಳ ಸ್ಥಾನವನ್ನು ಗ್ಯಾಜೆಟ್‌ಗಳು ಆಕ್ರಮಿಸಿಕೊಂಡಿವೆ. ಅವು ಮನಸ್ಸಿನೊಂದಿಗೇ ಪೈಪೋಟಿ ನಡೆಸುತ್ತವೆ. ಬೆರಳ ತುದಿಯ ಸ್ಪರ್ಶದೊಂದಿಗೆ ಲೋಕಾಲೋಕಕ್ಕೆ, ವಿಷಯದಿಂದ ವಿಷಯಕ್ಕೆ ಹಾರಾಟ ನಡೆಸುತ್ತವೆ. ಸ್ಲೇಟು, ಬಳಪ ಮ್ಯೂಸಿಯಮ್ ಸೇರಬಹುದಾದ ಕಾಲ ಬಂದಿದೆ. ಸಾವಧಾನದ ಕಲಿಕೆಯು ಮಾಯವಾಗುತ್ತಿದೆ. ಕುಳಿತು ಓದುವುದು, ಸಂಗೀತ ನೃತ್ಯಾಭ್ಯಾಸ ಮಾಡುವುದು, ಆಟದಲ್ಲಿ ಮಗ್ನರಾಗುವುದು ಕಡಿಮೆಯಾಗಿದೆ. ಮೊಬೈಲ್ ಎಂಬ ಮಾಯಾ ಹಿಡಿಕೆ ಕೈಗೆ ಬಂದಾಗಿನಿಂದ ಮನಸ್ಸಿಗೆ ಬಿಡುವು ಇಲ್ಲದಷ್ಟು ಕೆಲಸವಿದೆ. ಕರೆ ಬಂದಾಗ ಮಾತು, ಮಾತು ನಿಂತಾಗ ಕಿವಿಯೊಳಗೆ ಇಯರ್ ಫೋನು. ಟ್ಯಾಬ್ಲೆಟ್, ನೋಟ್‌ಬುಕ್ ಗಳಲ್ಲಿಯೇ ಓದು, ಸಂಗೀತ, ಆಟಪಾಠವೆಲ್ಲವೂ ಮುಗಿಯುತ್ತದೆ. ಇನ್ನು ಆದರ್ಶಗಳನ್ನು ಹುಡುಕುವುದು ರಿಯಾಲಿಟಿ ಶೋಗಳಲ್ಲಿ! ಕಷ್ಟಪಟ್ಟು ಏನಾದರೂ ಕಲಿಯಬೇಕೆಂದರೆ ಅದು ರಿಯಾಲಿಟಿ ಶೋಗಾಗಿ ಅನ್ನುವಂತಾಗಿದೆ.

ಮನಶಾಸ್ತ್ರಜ್ಞರ ಪ್ರಕಾರ ವ್ಯಕ್ತಿಯೊಬ್ಬನಿ(ಳಿ)ಗೆ ಮೂರು ಮೂಲ ಪ್ರವೃತ್ತಿ (instinct)ಗಳು ಬಾಧಿಸುತ್ತವೆ. ಅವುಗಳು ಯೌವನ, ಲೈಂಗಿಕತೆ ಮತ್ತು ಅಧಿಕಾರ. ಅಧಿಕಾರವಿದ್ದರೆ ಹಣ ತಂತಾನೆ ಬರುತ್ತದೆ. ವ್ಯಕ್ತಿ ಇವುಗಳಿಗೆ ಅಂಟಿಕೊಂಡು ಬಿಟ್ಟರೆ ಪರಿಣಾಮಗಳನ್ನು ಊಹಿಸಿಕೊಳ್ಳಬಹುದಲ್ಲ!

■ **ಮೂಚಿ**

## ಮಾತೇ ಮುತ್ತು

★ 'ಮುಗ್ಧತೆ' ಮತ್ತು 'ಆತ್ಮವಿಶ್ವಾಸ' ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ.

–ಮಾರ್ಕ್‌ಟ್ವೈನ್

★ ನಿಮ್ಮ ಶತ್ರುಗಳನ್ನು ಪ್ರೀತಿಸಿರಿ. ಅವರು ನಿಮ್ಮ ತಪ್ಪುಗಳನ್ನು ನಿಮಗೆ ತಿಳಿಸುತ್ತಾರೆ.

–ಬೆಂಜಮಿನ್ ಫ್ರಾಂಕ್ಲಿನ್

★ ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆ ಇದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೇ ಒದಗುತ್ತವೆ.

–ಡೋರಾ ಆಲ್ಬರ್ಟ್

★ ಎರಡನೇ ಬಾರಿ ಮಾಡುವ ಚಿಂತನೆಗಳು ಅತ್ಯುತ್ತಮವಾದವು.

–ಜಾನ್ ಡ್ರೈಡನ್

★ ಕಾನೂನು ನಮ್ಮನ್ನು ಕಾನೂನು ಬಾಹಿರ ಕೆಲಸಗಳಿಂದ ತಡೆಯುತ್ತದೆ. ಆದರೆ ಕಾನೂನಿನಿಂದ ಹೊರಗಿರುವ ಅನಾಚಾರಗಳನ್ನು ಅದು ತಡೆಯಲಾರದು.

–ದಾದಾ ಧರ್ಮಾಧಿಕಾರಿ

★ ತನ್ನ ಬೇಳೆ ಬೇಯಿಸಿಕೊಳ್ಳಲು ಸೈತಾನನೂ ಧರ್ಮಶಾಸ್ತ್ರದ ಮೊರೆ ಹೋಗುತ್ತಾನೆ.

–ಬಂಕಿಮಚಂದ್ರ

★ ಮನುಷ್ಯನ ಅತ್ಯುನ್ನತ ಭಾವನೆಗಳಿಗೆ ವಾಹಕವಾಗುವುದು ಸಂಗೀತ. ಅದು ಮನುಷ್ಯನ ಕಷ್ಟಗಳನ್ನು ಕ್ಷಣ ಕಾಲವಾದರೂ ಮರೆಸಿ ಸಮಾಧಾನವನ್ನುಂಟು ಮಾಡುತ್ತದೆ.

–ಟಿ.ಚೌಡಯ್ಯ

★ ಪತಿಗೆ ಚಾರಿತ್ರ್ಯ, ಮಕ್ಕಳಿಗೆ ತಾಯಿ, ಸಮಾಜಕ್ಕೆ ಶೀಲ, ವಿಶ್ವಕ್ಕೆ ದಯೆ, ಜೀವಿಗಳಿಗೆ ಕರುಣೆಯನ್ನು ನೀಡುವ ಮಹಾಪ್ರಕೃತಿಯ ಹೆಸರೇ ನಾರಿ.

–ರಮಣ ಮಹರ್ಷಿ

★ ನಾವು ಜ್ಞಾನ ಸಂಪಾದನೆ ಮಾಡಿದಂತೆಲ್ಲಾ ನಮ್ಮ ಪೂರ್ವಜರು ಮೂರ್ಖರು, ಅಲ್ಪ ಜ್ಞಾನಿಗಳು ಎಂದೆಲ್ಲಾ ತಿಳಿಯುತ್ತೇವೆ! ಆದರೆ ನಮ್ಮ ಮುಂದಿನ ಪೀಳಿಗೆಯವರು ನಮ್ಮ ಬಗ್ಗೆ ಹೀಗೆಯೇ ಯೋಚಿಸುತ್ತಾರೆ.

–ಪೋಪ್

★ ನೀವು ತಪ್ಪು ಮಾಡದಂತಿರಲು ನಿಮ್ಮನ್ನು ನೀವೇ ಸಂದೇಹದಿಂದ ನೋಡಿರಿ.

–ಸ್ವಾಮಿ ವಿವೇಕಾನಂದ

★ ದೇವರು ಇಡೀ ಜಗತ್ತನ್ನು ವ್ಯಾಪಿಸಿದ್ದಾನೆ. ಅವನನ್ನು ಪ್ರೀತಿಯಿಂದ ಕರೆದರೆ ನಿನ್ನ ಮೇಲೆ ಅವನು ಕೃಪೆಯ ಮಳೆ ಸುರಿಸುತ್ತಾನೆ.

–ಶಾರದಾದೇವಿ

★ ಆತ್ಮಪ್ರಶಂಸೆಗಿಂತ ಆತ್ಮನಿಂದನೆ ತಪ್ಪು. ಆತ್ಮ ನಿಂದನೆಯಿಂದ ದೈಹಿಕ, ಮಾನಸಿಕ ಅಭಿವೃದ್ಧಿ ಅಸಾಧ್ಯ. ಅದು ವ್ಯಕ್ತಿಗೆ ಇರುವ ಅರ್ಹತೆಯನ್ನು ಕುಂಠಿತಗೊಳಿಸುತ್ತದೆ.

–ಬಿ.ಎಂ.ಶ್ರೀ.

★ ಎಷ್ಟು ತಿಳಿದಿದೆಯೋ ಅದಕ್ಕಿಂತ ಕಡಿಮೆ ಮಾತನಾಡುವುದು ಕ್ಷೇಮ.

–ಶೇಕ್ಸ್‌ಪಿಯರ್

★ ದ್ವೇಷಿಸುವವನ ದೊಡ್ಡ ಶತ್ರುವೆಂದರೆ ಸ್ವತಃ ಅವನ ದ್ವೇಷ. ಅದು ಅವನಿಗೆ ಹಾನಿ ಮಾಡದೆ ಇರದು.

–ತಿರುವಳ್ಳುವರ್